
**ತೆಲುಗು ಮೂಲ: ಅಂಗರ ವೆಂಕಟ ಶಿವಪ್ರಸಾದ ರಾವು**
**ಕನ್ನಡಕ್ಕೆ: ವಿಜಯಾಶಂಕರ**

ಕಲೆ: ಸಂತೋಷ್ ಸಸಿಹಿತ್ಲು

# ದಾಂತ್ರಕ್ಷ



ಕಾಜೀಪೇಟೆ ರೈಲ್ವೇ ಸ್ಟೇಷನ್ನಿನಲ್ಲಿ ಸಿಕಂದರಾಬಾದಿನಿಂದ ವಿಶಾಖಪಟ್ಟಣಕ್ಕೆ ಹೊರಡುವ ರೈಲಿನಲ್ಲಿ ತ್ರೀಟೈರ್ ಬೋಗಿಯನ್ನು ಹುಡುಕಿ ಹತ್ತಿದೆ. ನನ್ನ ಸೀಟಿನ ಕೆಳಗೆ ಸೂಟ್‌ಕೇಸ್ ತಳ್ಳಿ, ಕೈಚೀಲವನ್ನು ಪಕ್ಕದಲ್ಲಿಟ್ಟುಕೊಂಡು ಕುಳಿತೆ. ಒಂದು ಸಾರಿ ಸುತ್ತಲೂ ಕಣ್ಣಾಡಿಸಿದೆ.

ಆಗ ಸಮಯ ರಾತ್ರಿ ಏಳುಗಂಟೆ.

"ನೀವು ಎಲ್ಲಿಯವರೆಗೆ?" ನನ್ನ ಎದುರಿಗೆ ಕುಳಿತಿದ್ದ ಹಿರಿಯರು ಕೇಳಿದರು.

"ವಿಶಾಖಪಟ್ಟಣದವರೆಗೆ..." ಎಂದೆ ನಾನು.

"ಹಮ್ಮಯ್ಯಾ! ಕೊನೆಯವರೆಗೆ ನನ್ನ ಜೊತೆ ಬರ್ತೀರಿ ಅಂದ ಹಾಗಾಯ್ತು... ಅಂದರೆ ನನ್ನ ಉದ್ದೇಶ... ನಾನೂ ವಿಶಾಖಪಟ್ಟಣಕ್ಕೇ ಹೋಗ್ತಿದೀನಿ..." ಎಂದರಾತ. ನಾನೇನೂ ಉತ್ತರ ಕೊಡಲಿಲ್ಲ.

ಸಿಕಂದರಾಬಾದ್‌ನಲ್ಲಿ ನನ್ನ ಆತ್ಮೀಯ ಮಿತ್ರನೊಬ್ಬ ಅಸ್ವಸ್ಥನಾಗಿದ್ದ. ಅವನನ್ನು ನೋಡಿಬರಲು ಹೋಗಿದ್ದೆ. ಈಗ ಅವನ ಆರೋಗ್ಯ ಸುಧಾರಿಸಿದೆ. ಇನ್ನೆರಡು ದಿನಗಳಲ್ಲಿ ಅವನನ್ನು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡ್ತಾರಂತೆ. ನನ್ನ ಬಹುಕಾಲದ ಮಿತ್ರ. ಬಹಳ ವರ್ಷಗಳ ನಂತರ ಅವನನ್ನು ನೋಡಿ ಬರ್ತಿದೀನಿ..." ನಾನು ಕೇಳದೆಯೇ ಅವರು ಹೇಳಿದರು.

ಕೆಲವರಿಗೆ ಅದೊಂದು ಅಭ್ಯಾಸ. ರೈಲಿನಲ್ಲಿ ಅಕ್ಕಪಕ್ಕ ಕುಳಿತವರೊಡನೆ ಪರಿಚಯ ಬೆಳೆಸಿಕೊಂಡು ಮಾತು ಪ್ರಾರಂಭಿಸಿ ಬಿಡುತ್ತಾರೆ. ಅದು ನನಗೆ ಹಿಡಿಸದು. ಅವರು ಯಾರೋ ನಾವು ಯಾರೋ... ಕೆಲವು ಕಾಲ ಒಟ್ಟಾಗಿ